

# ಯುದ್ಧಗಳು

■ ಡಾ. ಶಿವಶಂಕರ್ ಮೇಟಿ

ತನ್ನ ವೈದ್ಯಕೀಯ ತಂಡದೊಂದಿಗೆ, ಪ್ರಿನ್ಸೆಸ್ ರಾಯಲ್ ಮೆಟರ್ನಿಟಿ ಆಸ್ಪತ್ರೆಯ ಎರಡನೇ ಮಹಡಿಯನ್ನು ಏರುತ್ತಲಿದ್ದರು ಡಾಕ್ಟರ್ ಜಾಧವ್. ಅವರ ಜೊತೆಗೆ ಏದುಸಿರು ಬಿಡುತ್ತ ಮೆಟ್ಟಿಲುಗಳನ್ನು ಹತ್ತುವ ಸಾಹಸದಲ್ಲಿದ್ದ ಸಿಸ್ಟರ್ ಲೂಸಿ, 'ಡಾಕ್ಟರ್! ನಿನ್ನೆ ರಾತ್ರಿ, ಬಹುಶಃ ಕ್ರಿಪ್ಟಿಕ್ ಪ್ರೆಗ್ನೆನ್ಸಿ (ಗೂಢ/ಅರಿವಿಲ್ಲದ ಗರ್ಭಧಾರಣೆ) ಇರಬಹುದಾದ ಕೇಸೊಂದು ವಾರ್ಡಿನಲ್ಲಿ ದಾಖಲೆ ಆಗಿದೆ' ಎಂದಳು.

'ಇದರಲ್ಲೇನು ವಿಶೇಷ ಸಿಸ್ಟರ್. ಇಂತಹ ಪ್ರಕರಣಗಳಿಗೆ ಈ ದೇಶದಲ್ಲೇನು ಕೊರತೆ? ಶಾಲೆಗಳಲ್ಲಿ ಮುಕ್ತವಾದ ಲೈಂಗಿಕ ಶಿಕ್ಷಣವಿದ್ದರೂ, ಉಚಿತವಾಗಿ ಗರ್ಭನಿರೋಧಕ ಮಾತ್ರೆಗಳು ಲಭ್ಯವಿದ್ದರೂ ಈ ಹುಡುಗಿಯರು ಹೀಗೇಕೆ ಮಾಡುತ್ತಾರೆ? ಸ್ವಲ್ಪವಾದರೂ ಜವಾಬ್ದಾರಿ ಬೇಡವೇ?' ಎಂದು ಗೊಣಗುಟ್ಟಿದರು. ಭಾರತದಲ್ಲಾಗಿದ್ದರೆ ಇಂಥ ಹುಡುಗಿಯರ ಜೀವನದ ಗತಿ ಏನಾಗುತ್ತಿತ್ತು ಎಂಬ ಚಿತ್ರಣ ಅವರ ಮನದಲ್ಲೊಮ್ಮೆ ಮೂಡಿ ಮಾಯವಾಗದೆ ಇರಲಿಲ್ಲ.

'ಡಾಕ್ಟರ್, ನಿಜವಾದ ಮಾತು. ಮನೆಯಲ್ಲಿ ಇರುವ ಅತಿ ಸ್ವಾತಂತ್ರ್ಯವೂ ಇದಕ್ಕೆ ಕಾರಣವಿರಬಹುದು'.

'ಸ್ವಾತಂತ್ರ್ಯದ ಜೊತೆಗೆ ಇಲ್ಲಿಯ ಸಮಾಜವು ಇಂಥ ಗರ್ಭಧಾರಣೆಯನ್ನು ಒಪ್ಪಿಕೊಂಡಿರುವಾಗ, ಉಚಿತ ಆರೋಗ್ಯದ ಜೊತೆಗೆ ಮಗುವಿನ ಪೋಷಣೆಗೆ ಆರ್ಥಿಕ ನೆರವು ಸಿಗುತ್ತಿರುವಾಗ ಇಂತಹ ಪ್ರಕರಣಗಳು ಸಹಜ ತಾನೇ?' – ದೇಶದಲ್ಲಿ ಇರುವ ಸಾಮಾಜಿಕ ವ್ಯವಸ್ಥೆಯನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತಿರುವಾಗಲೇ, ಅವರೆಲ್ಲರೂ ಮೆಟ್ಟಿಲು ಹತ್ತಿ ವಾರ್ಡನ್ನು ತಲುಪಿದ್ದರು.

ಡಾಕ್ಟರ್ ಜಾಧವ ಸ್ಕಾಟ್ಲೆಂಡಿನ ಗ್ಲ್ಯಾಸ್ಗೋ ಪಟ್ಟಣದಲ್ಲಿರುವ ಈ ಆಸ್ಪತ್ರೆಯಲ್ಲಿ, ಪ್ರಸೂತಿ ತಜ್ಞರಾಗಿ ಸೇರಿ ಹತ್ತು ವರುಷಗಳಾಗಿದ್ದವು. ವಾರ್ಡಿನ ಉಸ್ತುವಾರಿಯಾಗಿದ್ದ ಡಾ. ಎಮಿಲಿ ಹೊಸದಾಗಿ ದಾಖಲೆಯಾಗಿದ್ದ ಯುವತಿಯ ಬಗ್ಗೆ ಡಾಕ್ಟರ್ ಜಾಧವರಿಗೆ ವಿವರಣೆ ಕೊಡತೊಡಗಿದಳು.

'ಮರಿಯಾ ಅಡಮೋವಿಚ್, ಯುಕ್ರೇನಿನಿಂದ ಬಂದಿರುವ ನಿರಾಶ್ರಿತ ಯುವತಿ, 26 ವರುಷ, ಆರೇಳು ತಿಂಗಳಿಂದ ಮುಟ್ಟು ಇಲ್ಲವಂತೆ. ಪ್ರೆಗ್ನೆನ್ಸಿ ಟೆಸ್ಟ್ ಪಾಸಿಟಿವ್ ಇದೆ, ಎರಡು ದಿನಗಳಿಂದ ವಾಂತಿ ಜಾಸ್ತಿ ಆಗಿದೆಯಂತೆ. ರಕ್ತ ಮತ್ತು ಮೂತ್ರ ಪರೀಕ್ಷೆಯನ್ನು ವಿನಂತಿಸಿಕೊಂಡಿದ್ದೇವೆ, ವರದಿಗಾಗಿ ಕಾಯುತ್ತಿದ್ದೇವೆ' ಎಂದು ರಾತ್ರಿ ಪಾಳಿಯ ವೈದ್ಯೆಯಿಂದ ಸಂಗ್ರಹಿಸಿದ ಮಾಹಿತಿಯನ್ನು ನೀಡಿದಳು. ಡಾಕ್ಟರ್ ಜಾಧವರಿಗೆ, ಸಹಜವಾಗಿ ದಾಖಲೆಯಾಗುತ್ತಿದ್ದ ನಿಗೂಢ ಗರ್ಭಧಾರಣೆಯ ಪ್ರಕರಣಗಳಿಗಿಂತ ಯಾಕೋ ಇದು ಭಿನ್ನವಾಗಿರಬಹುದೆಂದು ಅನಿಸಿತು. ಸಿಸ್ಟರ್ ಲೂಸಿ ಮತ್ತು ಡಾ. ಎಮಿಲಿಯ ಜೊತೆಗೆ ತಪಾಸಣೆಗೆಂದು ಅವಳು ದಾಖಲೆಯಾಗಿದ್ದ ಕೋಣೆಯ ಒಳಗೆ ಹೋದರು. ಮರಿಯಾ ಹಾಸಿಗೆಯನ್ನು ಬಿಟ್ಟು, ಕೋಣೆಯ ಮೂಲೆಯಲ್ಲಿದ್ದ ಕುರ್ಚಿಯೊಂದರಲ್ಲಿ ತಲೆ ತಗ್ಗಿಸಿ, ಕಾಲುಗಳೆರಡನ್ನೂ ಕುರ್ಚಿಯ ಮೇಲೆ ಮುದುರಿಕೊಂಡು ಕುಳಿತಿದ್ದಳು.

'ಗುಡ್ ಮಾರ್ನಿಂಗ್ ಮರಿಯಾ'– ಡಾಕ್ಟರ್ ಜಾಧವ್ ಮಾತಿಗೆ ಅವಳಿಂದ ಉತ್ತರವೇನೂ ಬರಲಿಲ್ಲ. ಅವಳು ತಲೆಯೆತ್ತಿದರೂ ಅವರ ಕಣ್ಣಲ್ಲಿ ಕಣ್ಣಿಟ್ಟು ನೋಡಲಿಲ್ಲ. ಡಾಕ್ಟರೊಮ್ಮೆ ತೀಕ್ಷ್ಣವಾಗಿ ಅವಳತ್ತ ಕಣ್ಣು ಹಾಯಿಸಿದರು. ಗುಳಿ ಬಿದ್ದ ಕಣ್ಣುಗಳು, ತರಚಿದ ತಲೆಗೂದಲು, ಬಲಹೀನವಾದ ನೋಟ, ಅಸ್ತವ್ಯಸ್ತ ಬಟ್ಟೆ, ಬಾಡಿದ ಮುಖ ಮತ್ತು ಸಣ್ಣಗೆ ಅದರುತ್ತಿದ್ದ ಆರಿದ ತುಟಿಗಳೆಲ್ಲವೂ ಅವಳ ಬಗ್ಗೆ ಏನನ್ನೋ ಹೇಳಲು ಬಯಸುತ್ತಿವೆ ಎಂದೆನಿಸಿತು.

ಅವಳಿಂದ ಉತ್ತರ ಬರದೇ ಇದ್ದಾಗ ಸಿಸ್ಟರ್ ಲೂಸಿ ಅಂದಳು, 'ಮರಿಯಾ, ನೀನು ನಮ್ಮೆಲ್ಲರ ಜೊತೆಗೆ ಮಾತನಾಡಿದರೆ ನಿನಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ. ದಯವಿಟ್ಟು ಮಾತನಾಡಲು ಪ್ರಯತ್ನಿಸು'. ಅವಳೊಮ್ಮೆ ಸಿಸ್ಟರ್ ಕಡೆಗೆ ನೋಡಿ ನಗೆ ಸೂಸಿ ಸುಮ್ಮನಾದಳು. ರಾತ್ರಿ ಪಾಳಿಯ ಡಾಕ್ಟರ್ ಹೇಗೆ ಅವಳಿಂದ ಮಾಹಿತಿ ಸಂಗ್ರಹಿಸಿರಬಹುದೆಂದು ಎಮಿಲಿ ಯೋಚಿಸತೊಡಗಿದಳು.

'ಸಿಸ್ಟರ್, ಬಹುಶಃ ಅವಳಿಗೆ ಇಂಗ್ಲಿಷ್ ಬರುವುದಿಲ್ಲವೆಂದು ಕಾಣಿಸುತ್ತದೆ. ದಯವಿಟ್ಟು ಅನುವಾದಕರನ್ನು ಕರೆಸಲು ಪ್ರಯತ್ನಿಸಿ, ನಾನು